ಓದುತ್ತಿದ್ದ ಶಾಲೆಗೆ ಸೇರಿದ, ಅಲ್ಲಿ ಹಲವು ಬಣ್ಣದ ಹಲವು ಸಂಸ್ಕೃತಿಗಳ ವಿದ್ಯಾರ್ಥಿಗಳೊಂದಿಗೆ ಬೆರೆತ. ಹೌಲೆಂಡ್ಸ್‌ನ ಮಗ ಪರಿಚಯವಾದ. ತನ್ನ ತಂದೆ ಕೆಲಸ ಮಾಡಲು ಹೋಗುತ್ತಿದ್ದಾಗ ಅವನಿಗೆ ಸ್ಟೀಫನ್‌ನನ್ನು ಮಾತಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಬಿಳಿಯರ ಮಗ, ತಮ್ಮನ್ನು ಆಳುವವರೆಂಬುದು ಅವನ ಭಾವನೆಯಾಗಿತ್ತು. ಶಾಲೆಯಲ್ಲಿ ಎಲ್ಲವೂ ಚೆನ್ನಾಗಿತ್ತು. ಆದರೆ, ಚಳವಳಿಯಲ್ಲಿ ಅವನ ತಂದೆ ಸಹೋದರರು ಭಾಗಿಯಾಗಿದ್ದಾರೆ, ಕೊಲೆ ಮಾಡುತ್ತಿದ್ದಾರೆ, ಇದರ ರಹಸ್ಯಗಳು ನುಜರೋಗೆ ಗೊತ್ತಿದೆ ಎಂದು ಬಂಧಿಸಿ ಅವನ ಶಿಕ್ಷಣ ಮುಂದುವರಿಯದಂತೆ ಮಾಡಿಬಿಡುತ್ತಾರೆ. ಯಾರೂ ಶಿಕ್ಷಣ ಪಡೆಯಬಾರದು, ಅವರು ಅಜ್ಞಾನಿಗಳಾಗಿದ್ದುಕೊಂಡು ತಮ್ಮ ಸೇವೆಯನ್ನು ಮಾಡುತ್ತಿರಬೇಕು ಎಂಬುದು ಬಿಳಿಯರ ಹುನ್ನಾರ. ಬೇರೆ ದೇಶಕ್ಕೆ ಹೋಗಿ ಇವನು ಓದನ್ನು ಮುಂದುವರಿಸಲು ಆಗುವುದಿಲ್ಲ. ಏಕೆಂದರೆ, ಇವನಿಗೆ ಆಯ್ಕೆಗಳೇ ಇಲ್ಲ. ಹೌಲೆಂಡ್ಸ್‌ನ ಮಗ ಸ್ಟೀಫನ್ ಈ ದೇಶ ಬಿಟ್ಟು ತಾನು ಇಂಗ್ಲೆಂಡಿಗೆ ಹೋಗಿ ಅಲ್ಲಿ ಶಿಕ್ಷಣ ಮುಂದುವರಿಸುತ್ತೇನೆಂದು ಹೇಳಿ ಈ ದೇಶ ಗಲಭೆ ದೊಂಬಿ ಹಿಂಸೆಗಳಿಂದ ಕೂಡಿದೆಯೆಂದು ಹೇಳಿದಾಗ ನುಜರೋಗೆ ತನಗೆ ಆಯ್ಕೆಗಳೇ ಇಲ್ಲವೆಂದು ಅಸಹಾಯಕನಾಗುತ್ತಾನೆ. ಈ ದೇಶದ ಜೊತೆ ತೇಲುವ ಇಲ್ಲವೇ ಮುಳುಗುವ ಎನ್ನುವ ಅವನಿಗೆ ಹೋಗಲು ಬೇರೆ ತಾವು ಇರಲಿಲ್ಲ. (ಪು. 158)

ಅಸಹಾಯಕ ವಾತಾವರಣದಲ್ಲಿ ಬದುಕಬೇಕಾದಂತಹ ನುಜರೋಗೆ ಶಿಕ್ಷಣವೊಂದೇ ದಾರಿಯಾಗಿತ್ತು ಮತ್ತು ಆಶಾಕಿರಣವಾಗಿತ್ತು. ಆದರೆ, ಅದನ್ನು ಕೂಡಾ ವಸಾಹತುಶಾಹಿ ವ್ಯವಸ್ಥೆ ಹಾಳು ಮಾಡಿತ್ತು. ಇದು ಈಗಲೂ ಸಹ ಬಡವರ ಸ್ಥಿತಿಯೇ ಆಗಿದೆ. ಎಲ್ಲಾ ದೇಶಗಳಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ಇರುವ ಸಂಬಂಧಗಳಲ್ಲಿ ಬಡವರ ಮಕ್ಕಳ ಶಿಕ್ಷಣಕ್ಕೆ ಕೊಡಲಿಪೆಟ್ಟು ಬೀಳುತ್ತಲೇ ಇರುತ್ತದೆ. ಆದರೂ ನುಜರೋಗೆ ಅವನ ಶಿಕ್ಷಣದ ಬಗ್ಗೆ ಮುಂದಿನ ಭವಿಷ್ಯದ ಬಗ್ಗೆ ಆಶಾಭಾವನೆ ಇತ್ತು. ತನ್ನ ಸ್ನೇಹಿತ ಮಿಯಾಕಿಯೂ ಸಹ ಇದೇ ಭಾವನೆ ವ್ಯಕ್ತಪಡಿಸಿ ಅವನಲ್ಲಿ ಆಶಾಕಿರಣವನ್ನು ಮೂಡಿಸಿಯೂ ಇದ್ದಳು. ಕಾದಂಬರಿಯಲ್ಲಿರುವ ಈ ಮಾತುಗಳನ್ನು ಗಮನಿಸಬಹುದು. 'ನುಜರೋಗೆ ಭವಿಷ್ಯದಲ್ಲಿ ಒಳ್ಳೆಯದಾಗುತ್ತೆ ಅಂತಲೇ ನಂಬಿದ್ದ. ಅಳುತ್ತಿರುವ ಒಂದು ಮಗುವಿಗೆ ಅವನು ಹೇಳಬಹುದಾದ ಒಂದು ಸಾಂತ್ವನವೆಂದರೆ ಭವಿಷ್ಯದಲ್ಲಿ ಒಳ್ಳೆಯದಾಗುತ್ತದೆ ಎಂದು ಮಾತ್ರ. ಭವಿಷ್ಯದಲ್ಲಿ ಇಟ್ಟುಕೊಳ್ಳುವ ಈ ಬಗೆಯ ನಂಬಿಕೆ ವರ್ತಮಾನದಿಂದ ಪಲಾಯನವಾಗುವ ಒಂದು ರೂಪ ಇರಬಹುದೆಂದು ಆತನಿಗೆ ಅನ್ನಿಸಲಿಲ್ಲ.' (ಪು. 157) ಈ ಮಾತುಗಳು ನುಜರೋಗೆ ಬಿಳಿಯ ಅಧಿಕಾರಿಯ ಮಗ ಸ್ಟೀಫನ್‌ನ ಸಮಾಧಾನಪಡಿಸುವಾಗ ನಿರೂಪಣೆಯಲ್ಲಿ ಬರುತ್ತವೆ. ಇದು ಪರಿಸ್ಥಿತಿಯ ವ್ಯಂಗ್ಯವಷ್ಟೇ ಅಲ್ಲ, ಬದುಕಿನ ವ್ಯಂಗ್ಯವೂ ಹೌದು.

ನುಜರೋಗೆಯ ತಂದೆ ನುಗುತೊ ಕೂಡಾ ಆಶಾವಾದಿಯೇ. ಅಷ್ಟೇ ಏಕೆ, ಅವನ ಇಬ್ಬರು ಹೆಂಡತಿಯರು ಮಕ್ಕಳು ಎಲ್ಲರೂ ಆಶಾವಾದಿಗಳು. ತಮ್ಮ ಭೂಮಿಯನ್ನು ತಾವು ಪಡೆಯಬಹುದು, ಮುಂದಿನ ದಿನಗಳು ಸುಖಕರವಾಗಿರುತ್ತವೆ ಎಂದು ಭಾವಿಸಿ ಬಿಳಿಯರ ವಿರುದ್ಧ ಹೋರಾಟ ಮಾಡುತ್ತಾರೆ. ಆದರೆ, ಕೆಲವು ಅವಕಾಶವಾದಿಗಳು ಬ್ರಿಟಿಷರ ಜೊತೆ ಸೇರಿ ಎಲ್ಲವನ್ನು ಹಾಳು ಮಾಡುತ್ತಾರೆ. ಅವರೆಲ್ಲರ ಸಾವಿಗೆ ಕಾರಣರಾಗುತ್ತಾರೆ. ಅಷ್ಟೇ ಅಲ್ಲ, ನುಜರೋಗೆಯ ಶಿಕ್ಷಣವೂ ನಿಲ್ಲುತ್ತದೆ. ಕ್ರಾಂತಿ, ಹೋರಾಟ ವಿಫಲವಾಗುತ್ತದೆ.

ಗೂಗಿ ಅವರು ಸರಳ ಕಥಾವಸ್ತು ಇರುವ ಗಟ್ಟಿಯಾದ ಕಥೆಯನ್ನು ತಮ್ಮ ಕಾದಂಬರಿಗಳಲ್ಲಿ ತರುತ್ತಾರೆ. ಎಲ್ಲಾ ವರ್ಗದ ಓದುಗರು, ರೈತರು, ಕಾರ್ಮಿಕರು ಒಳಗೊಂಡಂತೆ ಓದುವಂತಾಗಬೇಕೆಂಬುದು ಅವರ ಉದ್ದೇಶ. **The River between**ನಂತೆ ಈ **Weep not chaild** (ಅಳಬೇಡ ಕಂದ) ಕಾದಂಬರಿಯಲ್ಲೂ ನೇರ ಹಾಗೂ ಸರಳ ಕಥಾವಸ್ತುವಿದೆ. ಕಾಲ